# ವಿಶೇಷ ನ್ಯಾಯಾಲಯ (ಭದ್ರತೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಅಪರಾಧಗಳ ಅಧಿವಿಚಾರಣೆ) ಅಧಿನಿಯಮ, 1992

**(30.03.09ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 40ನೇ ಸಂಪುಟದ 1ನೇ ಸಂಚಿಕೆಯಲ್ಲಿ 142 ರಿಂದ 148ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ)**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಅಭಿರಕ್ಷಕನ ನೇಮಕಾತಿ ಮತ್ತು ಪ್ರಕಾರ್ಯಗಳು
4. ಮೋಸದಿಂದ ಮಾಡಿಕೊಂಡ ಕರಾರುಗಳನ್ನು ರದ್ದುಪಡಿಸುವುದು
5. ವಿಶೇಷ ನ್ಯಾಯಾಲಯದ ಸ್ಥಾಪನೆ
5ಎ. ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ನಡುವೆ ಮೊಕದ್ದಮೆಗಳ ಹಂಚಿಕೆ
6. ವಿಶೇಷ ನ್ಯಾಯಾಲಯವು ಪ್ರಕರಣಗಳನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವುದು
7. ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿ
8. ಜಂಟಿ ಅಧಿವಿಚಾರಣೆಗಳ ಸಂಬಂಧದಲ್ಲಿ ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿ
9. ವಿಶೇಷ ನ್ಯಾಯಾಲಯದ ಪ್ರಕ್ರಿಯೆ ಮತ್ತು ಅಧಿಕಾರಗಳು
9ಎ. ಸಿವಿಲ್ ವಿಷಯಗಳಲ್ಲಿ ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿ, ಅಧಿಕಾರಗಳು, ಪ್ರಾಧಿಕಾರ ಮತ್ತು ಕಾರ್ಯವಿಧಾನ
9ಬಿ. ಮಧ್ಯಸ್ಥಿಕೆ ವಿಷಯಗಳಲ್ಲಿ ವಿಶೇಷ ನ್ಯಾಯಾಲಯದ ಅಧಿಕಾರಗಳು
10. ಅಪೀಲು
11. ಹೊಣೆಗಾರಿಕೆಗಳ ತೀರಿಕೆ
11ಎ. ನಿಂದನೆಗಾಗಿ ದಂಡಿಸುವ ಅಧಿಕಾರ
12. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ
13. ಈ ಅಧಿನಿಯಮವು ಅಧ್ಯಾರೋಹೀ ಪರಿಣಾಮವನ್ನು ಹೊಂದಿರುವುದು
14. ನಿಯಮ ರಚನಾಧಿಕಾರ
15. ನಿರಸನ ಮತ್ತು ಉಳಿಸುವಿಕೆಗಳು

# ವಿಶೇಷ ನ್ಯಾಯಾಲಯ (ಭದ್ರತೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಅಪರಾಧಗಳ ಅಧಿವಿಚಾರಣೆ) ಅಧಿನಿಯಮ, 1992

**(1992ರ ಅಧಿನಿಯಮ ಸಂಖ್ಯೆ 27)**

[18ನೇ ಆಗಸ್ಟ್, 1992]

ಭದ್ರತೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಅಪರಾಧಗಳ ಅಧಿವಿಚಾರಣೆಗಾಗಿ ಒಂದು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ನಲವತ್ಮೂರನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ವಿಶೇಷ ನ್ಯಾಯಾಲಯ (ಭದ್ರತೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಅಪರಾಧಗಳ ಅಧಿವಿಚಾರಣೆ) ಅಧಿನಿಯಮ, 1992 ಎಂದು ಕರೆಯತಕ್ಕದ್ದು.

(2) ಇದು, 1992ರ ಜೂನ್ 6ನೆಯ ದಿನದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಂಹಿತೆ" ಎಂದರೆ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2);

(ಬಿ) "ಅಭಿರಕ್ಷಕ" ಎಂದರೆ 3ನೇ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ನೇಮಕಗೊಂಡ ಅಭಿರಕ್ಷಕ;

(ಸಿ) "ಭದ್ರತೆಗಳು" ಎಂಬುದರಲ್ಲಿ ಈ ಕೆಳಕಂಡವುಗಳು ಒಳಗೊಳ್ಳುತ್ತವೆ:-

(i) ಷೇರುಗಳು, ಸ್ಕ್ರಿಪ್‌ಗಳು, ಸ್ಟಾಕುಗಳು, ಬಂಧಪತ್ರಗಳು, ಡಿಬೆಂಚರುಗಳು, ಡಿಬೆಂಚರು ಸ್ಟಾಕು, ಭಾರತದ ಯೂನಿಟ್ ಟ್ರಸ್ಟಿನ ಯೂನಿಟ್ಟುಗಳು ಅಥವಾ ಯಾವುದೇ ಇತರ ಮ್ಯೂಚುವಲ್ ಫಂಡ್ ಅಥವಾ ಇತರ ಯಾವುದೇ ನಿಗಮಿತ ಕಂಪನಿಯಲ್ಲಿನ ಅಥವಾ ಇತರ ಯಾವುದೇ ನಿಗಮಿತ ನಿಕಾಯದಲ್ಲಿನ ಅಥವಾ ಅಂಥದ್ದೇ ಸ್ವರೂಪದ ಕ್ರಯ-ವಿಕ್ರಯಯೋಗ್ಯ ಭದ್ರತೆಗಳು;

(ii) ಸರ್ಕಾರದ ಭದ್ರತೆಗಳು; ಮತ್ತು

(iii) ಭದ್ರತೆಗಳಲ್ಲಿನ ಹಕ್ಕುಗಳು ಅಥವಾ ಹಿತಾಸಕ್ತಿಗಳು;

(ಡಿ) "ವಿಶೇಷ ನ್ಯಾಯಾಲಯ" ಎಂದರೆ, 5ನೆಯ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ವಿಶೇಷ ನ್ಯಾಯಾಲಯ.

**3. ಅಭಿರಕ್ಷಕನ ನೇಮಕಾತಿ ಮತ್ತು ಪ್ರಕಾರ್ಯಗಳು.**- (1) ಈ ಅಧಿನಿಯಮದ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದಂತೆ ಒಬ್ಬ ಅಥವಾ ಹೆಚ್ಚು ಅಭಿರಕ್ಷಕರನ್ನು ನೇಮಕ ಮಾಡಬಹುದು.

(2) ಯಾರೇ ವ್ಯಕ್ತಿಯು, 1991ರ ಏಪ್ರಿಲ್ 1ನೆಯ ದಿನಾಂಕದ ನಂತರ ಮತ್ತು 1992ರ ಜೂನ್ 6ನೆಯ ದಿನಾಂಕದಂದು ಮತ್ತು ಅದಕ್ಕೂ ಮುಂಚೆ, ಭದ್ರತೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಅಪರಾಧದಲ್ಲಿ ಭಾಗಿಯಾಗಿರುವನೆಂದು ತನಗೆ ಬಂದ ಮಾಹಿತಿಯ ಆಧಾರದ ಮೇಲೆ ಅಭಿರಕ್ಷಕನಿಗೆ ಮನವರಿಕೆಯಾದ ಮೇಲೆ ಅವನು ಅಂಥ ವ್ಯಕ್ತಿಯ ಹೆಸರನ್ನು ರಾಜಪತ್ರದಲ್ಲಿ ಅಧಿಸೂಚಿಸಬಹುದು.

(3) ಸಂಹಿತೆಯಲ್ಲಿ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, (2)ನೆಯ ಉಪಪ್ರಕರಣದ ಮೇರೆಗೆ ಆ ಅಧಿಸೂಚನೆಯ ದಿನಾಂಕದಂದು ಮತ್ತು ಅಂದಿನಿಂದ ಆ ಉಪಪ್ರಕರಣದ ಮೇರೆಗೆ ಅಧಿಸೂಚಿಸಲಾದ ಯಾರೇ ವ್ಯಕ್ತಿಗೆ ಸೇರಿದ ಯಾವುದೇ ಚರ ಅಥವಾ ಸ್ಥಿರ ಸ್ವತ್ತು, ಅಥವಾ ಅವೆರಡೂ, ಆ ಅಧಿಸೂಚನೆ ಹೊರಡಿಸುವುದರ ಜೊತೆಯಲ್ಲಿಯೇ ಜಫ್ತಿಯಾಗತಕ್ಕದ್ದು.

(4) (3)ನೆಯ ಉಪಪ್ರಕರಣದ ಅಡಿಯಲ್ಲಿ ಜಫ್ತಿಯಾದ ಸ್ವತ್ತಿನ ಬಗ್ಗೆ ಅಭಿರಕ್ಷಕನು ವಿಶೇಷ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ವ್ಯವಹರಿಸತಕ್ಕದ್ದು.

(5) ಅಭಿರಕ್ಷಕನು, ಈ ಪ್ರಕರಣದ ಹಾಗೂ 4ನೆಯ ಪ್ರಕರಣದ ಅಡಿಯಲ್ಲಿ ತನ್ನ ಅಧಿಕಾರಗಳನ್ನು ಚಲಾಯಿಸುವಾಗ ಅಥವಾ ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ಯಾರೇ ವ್ಯಕ್ತಿಯ ನೆರವನ್ನು ಪಡೆಯಬಹುದು.

**4. ಮೋಸದಿಂದ ಮಾಡಿಕೊಂಡ ಕರಾರುಗಳನ್ನು ರದ್ದುಪಡಿಸುವುದು.**- (1) ಅಭಿರಕ್ಷಕನು ಸೂಕ್ತವೆಂದು ಯೋಚಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ, 3ನೆಯ ಪ್ರಕರಣದ (2)ನೆಯ ಉಪಪ್ರಕರಣದ ಅಡಿಯಲ್ಲಿ ಅಧಿಸೂಚಿಸಲಾದ ವ್ಯಕ್ತಿಯ ಯಾವುದೇ ಸ್ವತ್ತಿನ ಸಂಬಂಧದಲ್ಲಿ 1991ರ ಏಪ್ರಿಲ್ 1ನೆಯ ದಿನಾಂಕದ ನಂತರ ಮತ್ತು 1992ರ ಜೂನ್ 6ನೆಯ ದಿನಾಂಕದಂದು ಮತ್ತು ಅದಕ್ಕೂ ಮುಂಚೆ ಯಾವುದೇ ಸಮಯದಲ್ಲಿ ಯಾವುದೇ ಕರಾರನ್ನು ಅಥವಾ ಒಪ್ಪಂದವನ್ನು ಮೋಸದಿಂದ ಮಾಡಲಾಗಿದೆ ಎಂದು ಅಥವಾ ಈ ಅಧಿನಿಯಮದ ಉಪಬಂಧಗಳನ್ನು ವಿಫಲಗೊಳಿಸಲು ಮಾಡಲಾಗಿದೆ ಎಂದು ತನಗೆ ಮನವರಿಕೆಯಾದರೆ, ಅವನು ಅಂಥ ಕರಾರು ಅಥವಾ ಒಪ್ಪಂದವನ್ನು ರದ್ದು ಮಾಡಬಹುದು ಮತ್ತು ಹಾಗೆ ರದ್ದುಗೊಳಿಸಿದ ಮೇಲೆ ಅಂಥ ಸ್ವತ್ತು ಈ ಅಧಿನಿಯಮದ ಮೇರೆಗೆ ಜಫ್ತಿಗೊಳ್ಳತಕ್ಕದ್ದು:

ಪರಂತು, ಆ ಕರಾರಿನ ಅಥವಾ ಒಪ್ಪಂದದ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ ಹೊರತು, ಅದನ್ನು ರದ್ದುಗೊಳಿಸತಕ್ಕದ್ದಲ್ಲ.

(2) 3ನೆಯ ಪ್ರಕರಣದ (2)ನೆಯ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಯಿಂದ ಅಥವಾ 4ನೆಯ ಪ್ರಕರಣದ (1)ನೆಯ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ರದ್ದಿಯಾತಿಯಿಂದ ಅಥವಾ ಅಭಿರಕ್ಷಕನು 3ನೇ ಪ್ರಕರಣದ ಅಥವಾ 4ನೆಯ ಪ್ರಕರಣದ ಮೇರೆಗೆ ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಿದ ಯಾವುದೇ ಇತರ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅದನ್ನು ಆಕ್ಷೇಪಿಸಿ ಅಂಥ ಅಧಿಸೂಚನೆಯನ್ನು, ರದ್ದಿಯಾತಿಯನ್ನು ಅಥವಾ ಆದೇಶವನ್ನು, ವಿಶೇಷ

ನ್ಯಾಯಾಲಯ (ಭದ್ರತೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಅಪರಾಧಗಳ ಅಧಿವಿಚಾರಣೆ) ವಿಧೇಯಕ, 1992– ಇದಕ್ಕೆ ರಾಷ್ಟ್ರಪತಿಯ ಅನುಮತಿ ದೊರೆಯುವ ದಿನಾಂಕಕ್ಕೆ ಮುಂಚೆ ಹೊರಡಿಸಿದ್ದ ವಿಶೇಷ ನ್ಯಾಯಾಲಯ (ಭದ್ರತೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಅಪರಾಧಗಳ ಅಧಿವಿಚಾರಣೆ) ವಿಧೇಯಕ, 1992– ಇದಕ್ಕೆ ರಾಷ್ಟ್ರಪತಿಯ ಅನುಮತಿ ದೊರೆತ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಮತ್ತು ಅಂಥ ಅಧಿಸೂಚನೆಯನ್ನು, ರದ್ದಿಯಾತಿಯನ್ನು ಅಥವಾ ಆದೇಶವನ್ನು ಆ ದಿನಾಂಕದಂದು ಅಥವಾ ಅದರ ತರುವಾಯ ಹೊರಡಿಸಿದ್ದರೆ, ಸಂದರ್ಭಾನುಸಾರ ಅಂಥ ಅಧಿಸೂಚನೆಯನ್ನು, ರದ್ದಿಯಾತಿಯನ್ನು ಅಥವಾ ಆದೇಶವನ್ನು ಹೊರಡಿಸಿದ ಮೂವತ್ತು ದಿನಗಳೊಳಗಾಗಿ, ವಿಶೇಷ ನ್ಯಾಯಾಲಯದ ಮುಂದೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಆ ವಿಶೇಷ ನ್ಯಾಯಾಲಯವು, ಪಕ್ಷಕಾರರ ಅಹವಾಲನ್ನು ಕೇಳಿದ ತರುವಾಯ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡಬಹುದು.

**5. ವಿಶೇಷ ನ್ಯಾಯಾಲಯದ ಸ್ಥಾಪನೆ.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ವಿಶೇಷ ನ್ಯಾಯಾಲಯ ಎಂದು ಕರೆಯಲಾಗುವ ಒಂದು ನ್ಯಾಯಾಲಯವನ್ನು ಸ್ಥಾಪಿಸತಕ್ಕದ್ದು.

(2) ವಿಶೇಷ ನ್ಯಾಯಾಲಯವು, ಭಾರತದ ಸರ್ವೋಚ್ಚ ನ್ಯಾಯಾಧೀಶನ ಸಹಮತಿಯನ್ನು ಪಡೆದು, ವಿಶೇಷ ನ್ಯಾಯಾಲಯವು ಯಾವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯಲ್ಲಿ ಇರುವುದೋ ಆ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನಿಂದ ನಾಮನಿರ್ದೇಶನಗೊಂಡ ಉಚ್ಚ ನ್ಯಾಯಾಲಯದ ಒಬ್ಬರು ಅಥವಾ ಹೆಚ್ಚು ಹಾಲಿ ನ್ಯಾಯಾಧೀಶರನ್ನು ಒಳಗೊಂಡಿರತಕ್ಕದ್ದು.

(3) ವಿಶೇಷ ನ್ಯಾಯಾಲಯದ ಒಬ್ಬ ನ್ಯಾಯಾಧೀಶನ ಪದವು ಗೈರುಹಾಜರಿಯ ಅಥವಾ ರಜೆಯ ಕಾರಣದಿಂದ ಖಾಲಿ ಇರುವಾಗ, ಆ ಪದದ ಕರ್ತವ್ಯಗಳನ್ನು, ವಿಶೇಷ ನ್ಯಾಯಾಲಯವು ಯಾವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ ಇರುವುದೋ ಆ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನು, ಭಾರತದ ಮುಖ್ಯ ನ್ಯಾಯಾಧೀಶನ ಸಹಮತಿಯನ್ನು ಪಡೆದು, ಆ ಉದ್ದೇಶಕ್ಕಾಗಿ ನಾಮ ನಿರ್ದೇಶನ ಮಾಡಬಹುದಾದ ಆ ಉಚ್ಚ ನ್ಯಾಯಾಲಯದ ನ್ಯಾಯಾಧೀಶನು ಆ ಪದದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಹಾಗೆ ನೇಮಕಗೊಂಡ ನ್ಯಾಯಾಧೀಶನು ಅಂತಿಮ ಆದೇಶವನ್ನು ಹೊರಡಿಸುವ ಅಧಿಕಾರಗಳನ್ನು ಒಳಗೊಂಡಂತೆ ವಿಶೇಷ ನ್ಯಾಯಾಲಯದ ಒಬ್ಬ ನ್ಯಾಯಾಧೀಶನ ಎಲ್ಲ ಅಧಿಕಾರ ವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು ಹೊಂದಿರತಕ್ಕದ್ದು.

**5ಎ. ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ನಡುವೆ ಮೊಕದ್ದಮೆಗಳ ಹಂಚಿಕೆ.–** ವಿಶೇಷ ನ್ಯಾಯಾಲಯವು ಇಬ್ಬರು ಅಥವಾ ಹೆಚ್ಚು ನ್ಯಾಯಾಧೀಶರನ್ನು ಒಳಗೊಂಡಿದ್ದಲ್ಲಿ, ಯಾವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ ವಿಶೇಷ ನ್ಯಾಯಾಲಯವು ಇರುವುದೋ ಆ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನು, ಕಾಲಕಾಲಕ್ಕೆ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ನ್ಯಾಯಾಧೀಶರ ನಡುವೆ ಮೊಕದ್ದಮೆಗಳನ್ನು ಹಂಚುವುದಕ್ಕೆ ಸಂಬಂಧಿಸಿದಂತೆ ಉಪಬಂಧಗಳನ್ನು ರಚಿಸಬಹುದು ಮತ್ತು ಅಂಥ ಪ್ರತಿಯೊಬ್ಬ ನ್ಯಾಯಾಧೀಶನು ವ್ಯವಹರಿಸಬಹುದಾದ ವಿಷಯಗಳನ್ನು ನಿರ್ದಿಷ್ಟಪಡಿಸಬಹುದು.

**6. ವಿಶೇಷ ನ್ಯಾಯಾಲಯವು ಪ್ರಕರಣಗಳನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವುದು.**- ವಿಶೇಷ ನ್ಯಾಯಾಲಯವು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಲಾಗಿರುವಂತೆ, ಅದರ ಮುಂದೆ ಹೂಡಲಾದ ಅಥವಾ ಅದಕ್ಕೆ ವರ್ಗಾಯಿಸಲಾದಂಥ ಪ್ರಕರಣಗಳನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದು ಅಥವಾ ಅವುಗಳನ್ನು ಅಧಿವಿಚಾರಣೆ ಮಾಡತಕ್ಕದ್ದು.

**7. ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿ.**- ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, 3ನೆಯ ಪ್ರಕರಣದ (2)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಅಪರಾಧದ ಸಂಬಂಧದಲ್ಲಿನ ಯಾವುದೇ ಪ್ರಾಸಿಕ್ಯೂಷನನ್ನು ವಿಶೇಷ ನ್ಯಾಯಾಲಯದಲ್ಲಿ ಮಾತ್ರ ಹೂಡತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ಅಂಥ ಅಪರಾಧದ ಸಂಬಂಧದಲ್ಲಿನ ಯಾವುದೇ ಪ್ರಾಸಿಕ್ಯೂಷನ್ನು ವಿಶೇಷ ನ್ಯಾಯಾಲಯಕ್ಕೆ ವರ್ಗಾವಣೆಯಾಗತಕ್ಕದ್ದು.

**8. ಜಂಟಿ ಅಧಿವಿಚಾರಣೆಗಳ ಸಂಬಂಧದಲ್ಲಿ ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿ.**- ವಿಶೇಷ ನ್ಯಾಯಾಲಯವು, 3ನೆಯ ಪ್ರಕರಣದ (2)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅಪರಾಧಕ್ಕೆ ಸಂಬಂಧಪಟ್ಟ ಯಾರೇ ವ್ಯಕ್ತಿಯನ್ನು ಮೂಲ ಅಪರಾಧಿ ಎಂದು, ಒಳಸಂಚುಗಾರನೆಂದು ಅಥವಾ ದುಷ್ಪ್ರೇರಕನೆಂದು ಮತ್ತು ಎಲ್ಲ ಇತರ ಅಪರಾಧಗಳನ್ನು ಮತ್ತು ಅವುಗಳೊಂದಿಗೆ ಜಂಟಿಯಾಗಿ ಅಧಿವಿಚಾರಣೆ ಮಾಡಬಹುದಾದಂಥ ಆಪಾದಿತರನ್ನು ಸಂಹಿತೆಗೆ ಅನುಸಾರವಾಗಿ ಒಂದೇ ಅಧಿವಿಚಾರಣೆಯಲ್ಲಿ ಅಧಿವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು.

**9. ವಿಶೇಷ ನ್ಯಾಯಾಲಯದ ಪ್ರಕ್ರಿಯೆ ಮತ್ತು ಅಧಿಕಾರಗಳು.**- (1) ವಿಶೇಷ ನ್ಯಾಯಾಲಯವು, ಅಂಥ ಪ್ರಕರಣಗಳ ಅಧಿವಿಚಾರಣೆ ಮಾಡುವಲ್ಲಿ, ಮ್ಯಾಜಿಸ್ಟ್ರೇಟನ ಮುಂದಿರುವ ವಾರಂಟು ಪ್ರಕರಣಗಳ ಅಧಿವಿಚಾರಣೆಗಾಗಿ ಸಂಹಿತೆಯು ನಿಯಮಿಸಿದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(2) ಈ ಅಧಿನಿಯಮದಲ್ಲಿ ವ್ಯಕ್ತವಾಗಿ ಉಪಬಂಧಿಸಿರುವುದನ್ನುಳಿದು, ಸಂಹಿತೆಯ ಉಪಬಂಧಗಳು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ ವಿಶೇಷ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳಿಗೆ ಅನ್ವಯವಾಗತಕ್ಕದ್ದು ಮತ್ತು ಸಂಹಿತೆಯ ಸದರಿ ಉಪಬಂಧಗಳ ಉದ್ದೇಶಗಳಿಗಾಗಿ, ವಿಶೇಷ ನ್ಯಾಯಾಲಯವು ಸೆಷನ್ಸ್ ನ್ಯಾಯಾಲಯವಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಆ ವಿಶೇಷ ನ್ಯಾಯಾಲಯವು ಸೆಷನ್ಸ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ವಿಶೇಷ ನ್ಯಾಯಾಲಯದ ಮುಂದೆ ಪ್ರಾಸಿಕ್ಯೂಷನ್ ನಡೆಸುವ ವ್ಯಕ್ತಿಯನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ಎಂಬುದಾಗಿ ಭಾವಿಸತಕ್ಕದ್ದು.

(3) ವಿಶೇಷ ನ್ಯಾಯಾಲಯವು, ತಾನು ಅಪರಾಧಿ ಎಂದು ನಿರ್ಣಯಿಸಿರುವ ಯಾರೇ ವ್ಯಕ್ತಿಗೆ, ಅಂಥ ವ್ಯಕ್ತಿಯು ಯಾವ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿರುವನೋ, ಆ ಅಪರಾಧದ ದಂಡನೆಗೆ ಕಾನೂನಿನ ಮೂಲಕ ಅಧಿಕೃತವಾದ ಯಾವುದೇ ದಂಡನೆಯನ್ನು ವಿಧಿಸಬಹುದು.

(4) ವಿಶೇಷ ನ್ಯಾಯಾಲಯವು ತನ್ನ ಮುಂದೆ ತರಲಾದ ಯಾವುದೇ ಇತರ ವಿಷಯದ ಬಗ್ಗೆ ವ್ಯವಹರಿಸುವಾಗ ಸ್ವಭಾವಸಿದ್ಧ ನ್ಯಾಯದ ತತ್ವಗಳಿಗೆ ಸುಸಂಗತವಾಗಿರುವಂತೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಪ್ರಕ್ರಿಯೆಯನ್ನು ಅನ್ವಯಿಸಬಹುದು.

**9ಎ. ಸಿವಿಲ್ ವಿಷಯಗಳಲ್ಲಿ ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿ, ಅಧಿಕಾರಗಳು, ಪ್ರಾಧಿಕಾರ ಮತ್ತು ಕಾರ್ಯವಿಧಾನ.-** (1) ವಿಶೇಷ ನ್ಯಾಯಾಲಯ (ಭದ್ರತೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಅಪರಾಧಗಳ ಅಧಿವಿಚಾರಣೆ) ತಿದ್ದುಪಡಿ ಅಧಿನಿಯಮ 1994- ಇದು ಪ್ರಾರಂಭವಾದಂದು ಮತ್ತು ಅಂದಿನಿಂದ, ವಿಶೇಷ ನ್ಯಾಯಾಲಯವು,-

(ಎ) 3ನೇ ಪ್ರಕರಣದ (3)ನೆಯ ಉಪಪ್ರಕರಣದ ಮೇರೆಗೆ ಜಪ್ತಿಯಾಗಿರುವ ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ;

(ಬಿ) 3ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಧಿಸೂಚಿಸಲಾಗಿರುವ ಒಬ್ಬ ವ್ಯಕ್ತಿಯು ಒಬ್ಬ ಪಕ್ಷಕಾರನಾಗಿ, ದಳ್ಳಾಳಿಯಾಗಿ, ಮಧ್ಯವರ್ತಿಯಾಗಿ ಅಥವಾ ಯಾವುದೇ ಇತರ ರೀತಿಯಲ್ಲಿ 1991ರ ಏಪ್ರಿಲ್ 1ನೇ ದಿನಾಂಕದಂದು ಮತ್ತು 1992ರ ಜೂನ್ 6ನೇ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಬರೆದುಕೊಡಲಾಗಿರುವ ಭದ್ರತೆಗಳ ವ್ಯವಹಾರಗಳಿಂದ ಉದ್ಭವಿಸುವ

- ಯಾವುದೇ ವಿಷಯ ಅಥವಾ ಕ್ಲೇಮಿಗೆ ಸಂಬಂಧಪಟ್ಟಂತೆ ಯಾವುದೇ ಸಿವಿಲ್ ನ್ಯಾಯಾಲಯವು, ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಚಲಾಯಿಸಬಹುದಾಗಿದ್ದಂಥ ಎಲ್ಲ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಚಲಾಯಿಸತಕ್ಕದ್ದು.

(2) ವಿಶೇಷ ನ್ಯಾಯಾಲಯ (ಭದ್ರತೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಅಪರಾಧಗಳ ಅಧಿವಿಚಾರಣೆ) ತಿದ್ದುಪಡಿ ಅಧಿನಿಯಮ, 1994ರ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಯಾವುದೇ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಪ್ರತಿಯೊಂದು ದಾವೆ, ಕ್ಲೇಮು ಅಥವಾ ಇತರ ಕಾನೂನು ವ್ಯವಹರಣೆಯು, (ಒಂದು ಅಪೀಲನ್ನು ಹೊರತುಪಡಿಸಿ), (1)ನೇ ಉಪಪ್ರಕರಣದ ಅಡಿಯಲ್ಲಿ ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಅಂಥ ಪ್ರಾರಂಭದ ತರುವಾಯ ದಾವೆಯ, ಕ್ಲೇಮಿನ ಅಥವಾ ವ್ಯವಹರಣೆಯ ವ್ಯಾಜ್ಯ ಕಾರಣವು ಉದ್ಭವವಾಗಿದ್ದರೆ, ಅದು ಅಂಥ ಪ್ರಾರಂಭದಂದು ವಿಶೇಷ ನ್ಯಾಯಾಲಯಕ್ಕೆ ವರ್ಗಾವಣೆಯಾಗತಕ್ಕದ್ದು ಮತ್ತು ವಿಶೇಷ ನ್ಯಾಯಾಲಯವು ಅಂಥ ದಾವೆ, ಕ್ಲೇಮು ಅಥವಾ ಇತರ ಕಾನೂನು ವ್ಯವಹರಣೆಯ ದಾಖಲೆಗಳನ್ನು ಸ್ವೀಕರಿಸಿದ ಮೇಲೆ ಅಂಥ ವರ್ಗಾವಣೆಗೆ ಮುಂಚೆ ಅದು ತಲುಪಿದ್ದ ಹಂತದಿಂದ ಅಥವಾ ಹೊಸದಾಗಿಯೇ ನ್ಯಾಯಾಲಯವು ಸೂಕ್ತವೆಂದು ಭಾವಿಸಬಹುದಾದಂಥ ಯಾವುದೇ ಹಿಂದಿನ ಹಂತದಿಂದ ಒಂದು ದಾವೆಯಾಗಿ, ಕ್ಲೇಮಾಗಿ ಅಥವಾ ಕಾನೂನು ವ್ಯವಹರಣೆಯಾಗಿ, ಸಾಧ್ಯವಾದಷ್ಟು ಅದೇ ರೀತಿಯಲ್ಲಿ ಅದರೊಂದಿಗೆ ವ್ಯವಹರಿಸಲು ಮುಂದುವರಿಯತಕ್ಕದ್ದು.

(3) ವಿಶೇಷ ನ್ಯಾಯಾಲಯ (ಭದ್ರತೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಅಪರಾಧಗಳ ಅಧಿವಿಚಾರಣೆ) ಅಧಿನಿಯಮ, 1994ರ ಪ್ರಾರಂಭದಂದು ಮತ್ತು ಅಂದಿನಿಂದ ವಿಶೇಷ ನ್ಯಾಯಾಲಯವನ್ನು ಹೊರತುಪಡಿಸಿ ಯಾವುದೇ ನ್ಯಾಯಾಲಯವು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ವಿಷಯ ಅಥವಾ ಕ್ಲೇಮಿಗೆ ಸಂಬಂಧಪಟ್ಟಂತೆ ಯಾವುದೇ ಅಧಿಕಾರ ವ್ಯಾಪ್ತಿ, ಅಧಿಕಾರ ಅಥವಾ ಪ್ರಾಧಿಕಾರವನ್ನು ಹೊಂದಿರತಕ್ಕದ್ದಲ್ಲ ಅಥವಾ ಚಲಾಯಿಸಲು ಹಕ್ಕು ಹೊಂದಿರತಕ್ಕದ್ದಲ್ಲ.

(4) ಈ ಪ್ರಕರಣದ ಅಡಿಯಲ್ಲಿನ ಯಾವುದೇ ವಿಷಯ ಅಥವಾ ಕ್ಲೇಮಿಗೆ ಸಂಬಂಧಪಟ್ಟ ಪ್ರಕರಣಗಳೊಂದಿಗೆ ವ್ಯವಹರಿಸುವಾಗ, ವಿಶೇಷ ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ಹೇಳಲಾದ ಕಾರ್ಯವಿಧಾನಕ್ಕೆ ಬದ್ಧವಾಗಿರತಕ್ಕದ್ದಲ್ಲ. ಆದರೆ, ಸ್ವಭಾವಸಿದ್ಧ ನ್ಯಾಯ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ಈ ಅಧಿನಿಯಮದ ಮತ್ತು ಯಾವುದೇ ನಿಯಮಗಳ ಇತರ ಉಪಬಂಧಗಳಿಗೆ ಒಳಪಟ್ಟು, ವಿಶೇಷ ನ್ಯಾಯಾಲಯವು ತನ್ನ ಕಾರ್ಯವಿಧಾನವನ್ನು ವಿನಿಯಮಿಸಿಕೊಳ್ಳುವ ಅಧಿಕಾರ ಹೊಂದಿರತಕ್ಕದ್ದು.

(5) ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಇತರ ಅಧಿಕಾರಗಳಿಗೆ ಬಾಧಕವಾಗದಂತೆ, ವಿಶೇಷ ನ್ಯಾಯಾಲಯವು, ಈ ಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ ದಾವೆಯ ಅಧಿವಿಚಾರಣೆ ಮಾಡುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ,-

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣ ಮಾಡಿಸಿ ಅವನನ್ನು ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಪತ್ತೆ ಮಾಡಲು ಮತ್ತು ಹಾಜರುಪಡಿಸುವಂತೆ ಅಗತ್ಯ ಪಡಿಸುವುದು;

(ಸಿ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಪಡೆಯುವುದು;

(ಡಿ) ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ 123ನೇ ಮತ್ತು 124ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅಂಥ ದಾಖಲೆ ಅಥವಾ ದಸ್ತಾವೇಜಿನ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿಗಳು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಕಮೀಷನುಗಳನ್ನು ಹೊರಡಿಸುವುದು;

(ಎಫ್) ತನ್ನ ತೀರ್ಮಾನಗಳನ್ನು ಪುನರವಲೋಕಿಸುವುದು;

(ಜಿ) ಪಾಲಿಸಲು ತಪ್ಪಿದ್ದಕ್ಕಾಗಿ ಪ್ರಕರಣವನ್ನು ವಜಾ ಮಾಡುವುದು ಅಥವಾ ಅದನ್ನು ಏಕಪಕ್ಷೀಯವಾಗಿ ತೀರ್ಮಾನಿಸುವುದು;

(ಹೆಚ್) ಪಾಲಿಸಲು ತಪ್ಪಿದ್ದಕ್ಕಾಗಿ ಯಾವುದೇ ಪ್ರಕರಣವನ್ನು ವಜಾ ಮಾಡಿದ ಯಾವುದೇ ಆದೇಶವನ್ನು ಅಥವಾ ಅದು ಏಕಪಕ್ಷೀಯವಾಗಿ ಹೊರಡಿಸಿದ ಆದೇಶವನ್ನು ರದ್ದುಗೊಳಿಸುವುದು;

(ಐ) 14ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಕೇಂದ್ರ ಸರ್ಕಾರವು ನಿಯಮಿಸಬಹುದಾದ ಯಾವುದೇ ಇತರ ವಿಷಯ.

**9ಬಿ. ಮಧ್ಯಸ್ಥಿಕೆ ವಿಷಯಗಳಲ್ಲಿ ವಿಶೇಷ ನ್ಯಾಯಾಲಯದ ಅಧಿಕಾರಗಳು.-** (1) ವಿಶೇಷ ನ್ಯಾಯಾಲಯವು, 9ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ವಿಷಯ ಅಥವಾ ಕ್ಲೇಮುಗಳಿಗೆ ಸಂಬಂಧಪಟ್ಟಂತೆ ಉಲ್ಲೇಖದ ವಿಷಯವಸ್ತುವಾದ ಯಾವುದೇ ಪ್ರಶ್ನೆಯನ್ನು ತೀರ್ಮಾನಿಸಲು ಮಧ್ಯಸ್ಥಿಕೆ ಅಧಿನಿಯಮ, 1940 (1940ರ 10)ರ ಅಡಿಯಲ್ಲಿ ಪ್ರದತ್ತವಾದ ನ್ಯಾಯಾಲಯದ ಅಧಿಕಾರ ವ್ಯಾಪ್ತಿ ಮತ್ತು ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ವಿಶೇಷ ನ್ಯಾಯಾಲಯ (ಭದ್ರತೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಅಪರಾಧಗಳ ಅಧಿವಿಚಾರಣೆ) ತಿದ್ದುಪಡಿ ಅಧಿನಿಯಮ, 1994ರ ಪ್ರಾರಂಭದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಯಾವುದೇ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿದ್ದ ಮತ್ತು ಮಧ್ಯಸ್ಥಿಕೆ ಅಧಿನಿಯಮ, 1940 (1940ರ 10)ರ ನಿಯಂತ್ರಣಕ್ಕೊಳಪಡುವ, 9ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ವಿಷಯ ಅಥವಾ ಕ್ಲೇಮಿಗೆ ಸಂಬಂಧಪಟ್ಟ ಪ್ರತಿಯೊಂದು ದಾವೆ ಅಥವಾ ಇತರ ವ್ಯವಹರಣೆಯು (ಅಪೀಲನ್ನು ಹೊರತುಪಡಿಸಿ) ಆ ದಿನಾಂಕದಂದು ವಿಶೇಷ ನ್ಯಾಯಾಲಯಕ್ಕೆ ವರ್ಗಾವಣೆಯಾಗತಕ್ಕದ್ದು.

**ವಿವರಣೆ.-** ಈ ಪ್ರಕರಣದ ಉದ್ದೇಶಗಳಿಗಾಗಿ "ನ್ಯಾಯಾಲಯ" ಮತ್ತು "ಉಲ್ಲೇಖ" ಎಂಬ ಪದಾವಳಿಗಳು ಮಧ್ಯಸ್ಥಿಕೆ ಅಧಿನಿಯಮ, 1940 (1940ರ 10)ರ 2ನೇ ಪ್ರಕರಣದ (ಸಿ) ಮತ್ತು (ಇ) ಖಂಡಗಳ ಅಡಿಯಲ್ಲಿ ಪರಿಭಾಷಿಸಿರುವ ಅನುಕ್ರಮ ಅರ್ಥಗಳನ್ನೇ ಹೊಂದಿರತಕ್ಕದ್ದು.

**10. ಅಪೀಲು.-** (1) ಸಂಹಿತೆಯಲ್ಲಿ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ಅಥವಾ ಮಧ್ಯಸ್ಥಿಕೆ ಅಧಿನಿಯಮ, 1940ರಲ್ಲಿ ಏನೇ ಇದ್ದರೂ, ವಿಶೇಷ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ, ಶಿಕ್ಷೆಯಾದೇಶ ಅಥವಾ ವಾದಕಾಲೀನ ಆದೇಶವಲ್ಲದ ಆದೇಶದ ವಿರುದ್ಧ, ಸಂಗತಿಗಳು ಮತ್ತು ಕಾನೂನು ಇವೆರಡನ್ನೂ ಆಧರಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು.

(2) ಈ ಮೊದಲು ಹೇಳಿರುವುದನ್ನು ಹೊರತುಪಡಿಸಿ, ವಿಶೇಷ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ, ಶಿಕ್ಷೆಯಾದೇಶ ಅಥವಾ ಆದೇಶ ಇವುಗಳ ವಿರುದ್ಧ ಯಾವುದೇ ನ್ಯಾಯಾಲಯಕ್ಕೆ ಅಪೀಲನ್ನು ಅಥವಾ ಪುನರೀಕ್ಷಣೆ ಅರ್ಜಿಯನ್ನು ಸಲ್ಲಿಸಲು ಅವಕಾಶವಿರತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು, ವಿಶೇಷ ನ್ಯಾಯಾಲಯದ ಯಾವುದೇ ತೀರ್ಪಿನ, ಶಿಕ್ಷೆಯಾದೇಶದ ಅಥವಾ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ಸಲ್ಲಿಸತಕ್ಕದ್ದು:

ಪರಂತು, ಸರ್ವೋಚ್ಚ ನ್ಯಾಯಾಲಯವು, ಅಪೀಲುದಾರನು ಮೂವತ್ತು ದಿನಗಳ ಅವಧಿಯೊಳಗಾಗಿ ಅಪೀಲು ಸಲ್ಲಿಸಲು ಸಾಧ್ಯವಾಗದೇ ಇರುವ ಬಗ್ಗೆ ಸಾಕಷ್ಟು ಕಾರಣವಿತ್ತೆಂದು ಅದಕ್ಕೆ ಮನವರಿಕೆಯಾದರೆ, ಮೂವತ್ತು ದಿನಗಳ ಸದರಿ ಅವಧಿಯ ಮುಕ್ತಾಯದ ನಂತರವೂ ಅಪೀಲನ್ನು ಸ್ವೀಕರಿಸಬಹುದು.

**11. ಹೊಣೆಗಾರಿಕೆಗಳ ತೀರಿಕೆ.-** (1) ಸಂಹಿತೆಯಲ್ಲಿ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ವಿಶೇಷ ನ್ಯಾಯಾಲಯವು, ಜಪ್ತಿಗೆ ಒಳಗಾಗಿರುವ ಸ್ವತ್ತಿನ ವಿಲೇವಾರಿ ಮಾಡುವಂತೆ ಅಭಿರಕ್ಷಕನಿಗೆ ನಿರ್ದೇಶಿಸಿ ತಾನು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡಬಹುದು.

(2) ಈ ಕೆಳಕಂಡ ಹೊಣೆಗಾರಿಕೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಈ ಮುಂದಿನ ಕ್ರಮದಲ್ಲಿ ಪೂರ್ಣವಾಗಿ ಸಂದಾಯ ಮಾಡತಕ್ಕದ್ದು ಅಥವಾ ತೀರಿಸತಕ್ಕದ್ದು,-

(ಎ) 3ನೆಯ ಪ್ರಕರಣದ (2)ನೆಯ ಉಪಪ್ರಕರಣದ ಅಡಿಯಲ್ಲಿ ಅಭಿರಕ್ಷಕನು ಅಧಿಸೂಚಿಸಿದ ವ್ಯಕ್ತಿಗಳಿಂದ ಕೇಂದ್ರ ಸರ್ಕಾರಕ್ಕೆ ಅಥವಾ ಯಾವುದೇ ರಾಜ್ಯ ಸರ್ಕಾರಕ್ಕೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಬಾಕಿಯಿರುವ ಎಲ್ಲ ರಾಜಸ್ವಗಳು, ತೆರಿಗೆಗಳು, ಉಪಕರಗಳು ಮತ್ತು ದರಗಳು;

(ಬಿ) ಅಭಿರಕ್ಷಕನು ಹಾಗೆ ಅಧಿಸೂಚಿಸಿದ ವ್ಯಕ್ತಿಗಳಿಂದ ಯಾವುದೇ ಬ್ಯಾಂಕಿಗೆ ಅಥವಾ ಹಣಕಾಸು ಸಂಸ್ಥೆಗೆ ಅಥವಾ ಮ್ಯೂಚುವಲ್ ಫಂಡಿಗೆ ಬಾಕಿಯಿರುವ ಎಲ್ಲ ಮೊಬಲಗುಗಳು;

(ಸಿ) ವಿಶೇಷ ನ್ಯಾಯಾಲಯವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಯಾವುವೇ ಇತರ ಹೊಣೆಗಾರಿಕೆ.

**11ಎ. ನಿಂದನೆಗಾಗಿ ದಂಡಿಸುವ ಅಧಿಕಾರ.–** ಉಚ್ಚ ನ್ಯಾಯಾಲಯದ ನಿಂದನೆಗೆ ಸಂಬಂಧಪಟ್ಟಂತೆ ಆ ನ್ಯಾಯಾಲಯವು ಹೊಂದಿರುವಂಥವೇ ಮತ್ತು ಚಲಾಯಿಸಬಹುದಾದಂಥವೇ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ವಿಶೇಷ ನ್ಯಾಯಾಲಯವು ಹೊಂದಿರತಕ್ಕದ್ದು ಹಾಗೂ ಅವುಗಳನ್ನು ಚಲಾಯಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ, ನ್ಯಾಯಾಲಯ ನಿಂದನೆ ಅಧಿನಿಯಮ, 1971 (1971ರ 70)ರ ಉಪಬಂಧಗಳು ಈ ಮುಂದಿನ ಎಂದರೆ,–

(ಎ) ಅದರಲ್ಲಿ ಒಂದು ಉಚ್ಚ ನ್ಯಾಯಾಲಯಕ್ಕೆ ಮಾಡಲಾಗಿರುವ ಉಲ್ಲೇಖಗಳು ಅಂಥ ವಿಶೇಷ ನ್ಯಾಯಾಲಯಕ್ಕೆ ಮಾಡಿರುವ ಉಲ್ಲೇಖಗಳನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕದ್ದು;

(ಬಿ) ಸದರಿ ಅಧಿನಿಯಮದ 15ನೇ ಪ್ರಕರಣದಲ್ಲಿ ಅಡ್ವೋಕೇಟ್ ಜನರಲ್ಲನಿಗೆ ಮಾಡಲಾಗಿರುವ ಉಲ್ಲೇಖಗಳನ್ನು ವಿಶೇಷ ನ್ಯಾಯಾಲಯಕ್ಕೆ ಸಂಬಂಧಪಟ್ಟಂತೆ ಅಡ್ವೋಕೇಟ್ ಜನರಲ್ಲನಿಗೆ ಅಥವಾ ಸಾಲಿಸಿಟರ್ ಜನರಲ್ಲನಿಗೆ ಅಥವಾ ಅಡಿಷನಲ್ ಸಾಲಿಸಿಟರ್ ಜನರಲ್ಲನಿಗೆ ಮಾಡಿರುವ ಉಲ್ಲೇಖವೆಂದು ಅರ್ಥೈಸತಕ್ಕದ್ದು.

– ಎಂಬ ಮಾರ್ಪಾಟುಗಳಿಗೊಳಪಟ್ಟು ಪರಿಣಾಮ ಹೊಂದಿರತಕ್ಕದ್ದು.

**12. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.–** (1) ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದ ಅಥವಾ ಅಭಿರಕ್ಷಕನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಯ ಬಗ್ಗೆ ಕೇಂದ್ರ ಸರ್ಕಾರದ ಅಥವಾ ಅದರ ಯಾರೇ ಅಧಿಕಾರಿಗಳ ಅಥವಾ ಇತರ ನೌಕರರ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**13. ಈ ಅಧಿನಿಯಮವು ಅಧ್ಯಾರೋಹೀ ಪರಿಣಾಮವನ್ನು ಹೊಂದಿರುವುದು.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ಇತರ ಕಾನೂನಿನ ಕಾರಣದಿಂದ ಪರಿಣಾಮಕಾರಿಯಾಗಿರುವ ಯಾವುದೇ ಲಿಖಿತದಲ್ಲಿ, ಅಥವಾ ಯಾವುದೇ ನ್ಯಾಯಾಲಯದ, ನ್ಯಾಯಾಧೀಕರಣದ ಅಥವಾ ಇತರ ಪ್ರಾಧಿಕಾರದ ಯಾವುದೇ ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಇದಕ್ಕೆ ಅಸಂಗತವಾಗಿ ಏನೇ ಇದ್ದರೂ, ಪರಿಣಾಮಕಾರಿಯಾಗತಕ್ಕದ್ದು.

**14. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಅದಕ್ಕಿಂತ

ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವುಂಟು ಮಾಡತಕ್ಕದ್ದಲ್ಲ.

**15. ನಿರಸನ ಮತ್ತು ಉಳಿಸುವಿಕೆಗಳು.-** (1) ವಿಶೇಷ ನ್ಯಾಯಾಲಯ (ಭದ್ರತೆಗಳ ವ್ಯವಹಾರಗಳಿಗೆ ಸಂಬಂಧಿಸಿದ ಅಪರಾಧಗಳ ಅಧಿವಿಚಾರಣೆ) ಅಧ್ಯಾದೇಶ, 1992ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಲಾದ ಯಾವುದೇ ಕಾರ್ಯವನ್ನು ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದೀ ಉಪಬಂಧಗಳ ಮೇರೆಗೆ ಮಾಡಲಾಗಿದೆ ಎಂದು ಅಥವಾ ತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

* * *